ತೇಜಸ್ವಿ ಅವರಿಂದಾಗಿ ಮುನಾವರ್ ಪ್ರಾಣ ಉಳೀತು' ಅಂದರು.

ಎಂಡಿ ಅವರಿಗೆ ವಿಷಯ ಗೊತ್ತಾಗಿದೆ. ಅವರು, 'ನೀವೇ ಹೋಗಿ ಮ್ಯಾನೇಜ್‌ಮೆಂಟ್ ಪರವಾಗಿ ತೇಜಸ್ವಿ ಅವರಿಗೆ ಥ್ಯಾಂಕ್ಸ್ ಹೇಳಿ ಬನ್ನಿ ಅಂತ ನನ್ನನ್ನು ಕಳಿಸಿದರು' ಎನ್ನುತ್ತ ನ್ಯೂಸ್ ಎಡಿಟರ್ ಮುಖ ನೋಡಿದರು. ಅರ್ಧ ಗಂಟೆ ಕಾದರೂ ತೇಜಸ್ವಿ ಬರಲಿಲ್ಲ. ಅವರು ಬಂದ ಮೇಲೆ ನಂಗೆ ಫೋನ್ ಮಾಡಿ, ಮತ್ತೆ ಬರ್ತೀನಿ ಅಂತ ಹೇಳಿ ಹೆಗಡೆ ಹೋದರು.

ತೇಜಸ್ವಿಗೆ ನೋಟಿಸ್ ಕೊಟ್ಟಿದ್ದರೆ ತಪ್ಪಾಗುತ್ತಿತ್ತು ಅಂತ ನ್ಯೂಸ್ ಎಡಿಟರ್‌ಗೆ ಅನ್ನಿಸಿತು. ಸಂಜೆ ಐದಾದರೂ ತೇಜಸ್ವಿ ಬರಲೇ ಇಲ್ಲ. ಅಜಯನೂ ಇಲ್ಲ. ಇಬ್ಬರೂ ಫೋನ್ ಸ್ವಿಚ್ ಆಫ್ ಮಾಡಿಕೊಂಡಿದ್ದಾರೆ ಅಂತ ಓಂಪ್ರಕಾಶ್ ಬಂದು ಹೇಳಿ ಹೋದರು.

ನಿನ್ನೆ ತೇಜಸ್ವಿ ಪ್ರಿಂಟಿಂಗ್ ಸೆಕ್ಷನ್‌ನ ಎಂಪ್ಲಾಯಿಯೊಬ್ಬರನ್ನು ಆಸ್ಪತ್ರೆಗೆ ಸೇರಿಸಿ, ಬ್ಲಡ್‌ಗೆ ವ್ಯವಸ್ಥೆ ಮಾಡಿ ಅವರ ಪ್ರಾಣ ಉಳಿಯುವಂತೆ ನೋಡಿಕೊಂಡರಂತೆ ಅಂತ ಇಡೀ ಆಫೀಸಿನಲ್ಲಿ ಎಲ್ಲರೂ ಮಾತಾಡಿಕೊಂಡರು. ಅವರಿಗೆ ಥ್ಯಾಂಕ್ಸ್ ಹೇಳಲು ಪರ್ಸೊನೆಲ್ ಮ್ಯಾನೇಜರೇ ಬಂದಿದ್ದರು ಅನ್ನೋದು ಎಲ್ಲರಿಗೂ ಗೊತ್ತಾಯಿತು. ಬೇರೆ ಸೆಕ್ಷನ್‌ಗಳಲ್ಲಿ ಕೆಲಸ ಮಾಡುವ ಅನೇಕರು ತೇಜಸ್ವಿಯನ್ನು ನೋಡಲು ಎಡಿಟೋರಿಯಲ್ ಸೆಕ್ಷನ್‌ಗೆ ಬಂದು ಹೋದರು.

'ಎಲ್ಲಿ ತೇಜಸ್ವಿ? ಇಷ್ಟೊತ್ತಾದರೂ ಬರಲಿಲ್ಲ. ಇವತ್ತು ಬರ್ತಾನೊ ಇಲ್ಲವೊ? ಅವನು ಬಂದ ಕೂಡಲೇ ತಿಳಿಸಿ. ಎಂಡಿಯವರು ಅವನ ಜತೆ ಮಾತಾಡಬೇಕಂತೆ ಅವರ ಪಿಎ ಫೋನ್ ಮಾಡಿದ್ದರು' ಅಂತ ಹೇಳುತ್ತ ನ್ಯೂಸ್ ಎಡಿಟರ್ ಎರಡು ಸಲ ಡೆಸ್ಕ್ ಬಳಿ ಬಂದು ಹೋದರು.

ಒಂದು ವಾರ ಕಳೆಯಿತು. ತೇಜಸ್ವಿ, ಅಜಯ್ ಇಬ್ಬರೂ ಪತ್ತೆ ಇಲ್ಲ. ನನ್ನ ಮಾತಿಂದ ಬೇಸರ ಮಾಡಿಕೊಂಡು ಊರಿಗೆ ಹೋಗಿರಬಹುದೇ ಅಂತ ನ್ಯೂಸ್ ಎಡಿಟರ್ ಮನಸ್ಸಿನಲ್ಲೇ ನೊಂದುಕೊಂಡರು. ಅವನು ಬಂದ ಕೂಡಲೇ ಸಾರಿ ಕೇಳಬೇಕು ಅಂತಲೂ ನಿರ್ಧರಿಸಿದರು.

★★★

'ಸರ್, ಸಂಪಾದಕರನ್ನು ನೋಡಬೇಕು ಅಂತ ಒಬ್ಬರು ಹೆಂಗಸು ಬಂದಿದ್ದಾರೆ...' ಅವರನ್ನು ವಿಸಿಟರ್ಸ್ ರೂಮಿನಲ್ಲಿ ಕೂರಿಸಿದ್ದೇನೆ ಅಂತ ಅಟೆಂಡರ್ ಬಂದು ಹೇಳಿದ.

ಮೀಟಿಂಗ್ ಮುಗಿಯೋವರೆಗೆ ಅವರು ಯಾರನ್ನೂ ಭೇಟಿ ಮಾಡಲ್ಲ ಅನ್ನುತ್ತ, 'ಆ ಹೆಂಗಸನ್ನು ಆಫೀಸಿನೊಳಕ್ಕೆ ಬರಲು ಬಿಟ್ಟವರು ಯಾರು?' ಅಂತ ನ್ಯೂಸ್ ಎಡಿಟರ್ ರೇಗಿದರು.

ಮೀಟಿಂಗ್‌ಗೆ ಸಂಪಾದಕರು ಅರ್ಧ ಗಂಟೆ ತಡವಾಗಿ ಬಂದರು. ನಾಲ್ಕು ಗಂಟೆ ಆಗುತ್ತ ಬಂದರೂ ಮೀಟಿಂಗ್ ಮುಗಿಯುವ ಲಕ್ಷಣಗಳು ಕಾಣಿಸಲಿಲ್ಲ.

'ಸರ್, ಎಡಿಟರನ್ನು ನೋಡಬೇಕು ಅಂತ ಬಂದಿರೊ ಆಯಮ್ಮ ತೇಜಸ್ವಿ ತಾಯಿಯಂತೆ!' ಅಂತ ಅಟೆಂಡರ್ ಮೀಟಿಂಗ್ ರೂಮಿನೊಳಕ್ಕೆ ಬಂದು ಕಿವಿಯಲ್ಲಿ ಹೇಳಿ ಹೋದ.

ಕೂಡಲೇ ಎಚ್ಚೆತ್ತುಕೊಂಡ ನ್ಯೂಸ್ ಎಡಿಟರ್, 'ಸರ್, ತೇಜಸ್ವಿ ತಾಯಿ ಬಂದಿದ್ದಾರೆ. ನಿಮ್ಮನ್ನು ನೋಡಬೇಕಂತೆ. ಅವನು ಒಂದು ವಾರದಿಂದ ಆಫೀಸ್‌ಗೆ ಬಂದಿಲ್ಲ. ಏನೋ ಪ್ರಾಬ್ಲಂ ಇರೋ ಹಂಗಿದೆ' ಅಂತ ಸಂಪಾದಕರ ಕಡೆ ನೋಡುತ್ತ ಹೇಳಿದರು.

'ನಾನು ತೇಜಸ್ವಿ ತಾಯಿ' ಅನ್ನುತ್ತ ಎರಡೂ ಕೈಗಳನ್ನು ಜೋಡಿಸಿ ಎಲ್ಲರಿಗೂ ನಮಸ್ಕಾರ ಎನ್ನುತ್ತ ಒಳಕ್ಕೆ ಬಂದ ಹೆಂಗಸಿನ ವಯಸ್ಸು ಸುಮಾರು ಐವತ್ತಿರಬಹುದು. ಮುಖದ ಮೇಲೆ ಸುಶಿಕ್ಷಿತ ಕಳೆ ಎದ್ದು ಕಾಣುತ್ತಿತ್ತು. ಎಡಿಟರ್ ಎದ್ದು ನಿಂತು ಬನ್ನಿ ಅಂದರು. ಆಕೆ ಕುರ್ಚಿಯೊಂದರಲ್ಲಿ ಕೂರುತ್ತಿದ್ದಂತೆ, 'ಹೇಳಿ ಏನು ವಿಷಯ' ಅಂತ ಕೇಳಿದರು...

'ಸರ್, ನನ್ನ ಮಗ ತೇಜಸ್ವಿ ನಿಮ್ಮ ಆಫೀಸಿನ ಸೀತಾಲಕ್ಷ್ಮಿ ಅನ್ನೋರ ಬಗ್ಗೆ ಏನೋ ತಮಾಷೆಯಾಗಿ